**ಸಾಕ್ಷಿಗೆ ದಿನಾಂಕಃ 01.08.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಯು.ಕೆ. ವಕೀಲರಿಂದಃ**

ನಾನು ಹೈಸ್ಕೂಲ್ ಟೀಚರ್ ಆಗಿ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ ತಾಯೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಹೆಂಡತಿಯು ಸಹ ಟೀಚರ್ ಆಗಿ ಕೆಲಸ ಮಾಡುತ್ತಿದ್ದಾರೆ. ನಾವು ಮೂಲತಃ ಚಿಕ್ಕೇಬಾಗಿಲು ಗ್ರಾಮದವರು. ನಾವುಗಳು ಹದಿನೈದು ವರ್ಷದಿಂದ ಟಿ.ನರಸೀಪುರ ಟೌನಿನಲ್ಲಿ ವಾಸ ಇರುತ್ತೇವೆ. ಆರೋಪಿಯೂ ಸಹ ಟಿ.ನರಸೀಪುರದ ವಿದ್ಯಾನಗರದಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಆರೋಪಿಯು ನನಗೆ ಪರಿಚಯ ಇರುತ್ತಾರೆ. ನಾನು ಮೊದಲು ಚೀಟಿ ವ್ಯವಹಾರವನ್ನು ಮಾಡುತ್ತಿದ್ದೆನು ಎಂದರೆ ಸರಿ. ಆ ಸಮಯದಲ್ಲಿ ನಾನು ಎಸ್.ಬಿ.ಐ. ಬ್ಯಾಂಕಿನ ಎದುರು Jayavardhan Finance ಎಂದು ಕಛೇರಿಯನ್ನು ತೆರೆದಿದ್ದೆನು ಎಂದರೆ ಸರಿ. ನಾನು ಆಟೋ ಚಾಲಕರಿಗೆ ಮತ್ತು ಅಕ್ಕಪಕ್ಕದವರಿಗೆ ಹಣವನ್ನು ಸಾಲವಾಗಿ ನೀಡುತ್ತಿದ್ದೆನು ಎಂದರೆ ಸರಿ. ಸದರಿ ಕಛೇರಿ ಈಗಲೂ ಇರುತ್ತದೆ ಎಂದರೆ ಸರಿ. ಸದರಿ ಕಛೇರಿಯಲ್ಲಿ ನಾಗರಾಜು ಎನ್ನುವವರು ಇರುತ್ತಾರೆ ಎಂದರೆ ಸರಿ.

ಆರೋಪಿಯು ನಮ್ಮಲ್ಲಿ ಚೀಟಿ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿ. ಆರೋಪಿಯು 4 ಲಾರಿಗಳನ್ನು ಇಟ್ಟಿದ್ದರು ಎಂದರೆ ಸರಿ. ಆರೋಪಿಯ ಹಣದ ವ್ಯವಹಾರವನ್ನು ತಿಳಿದ ಮೇಲೆ ನಾನು ಅವರಿಗೆ ಚೀಟಿಯನ್ನು ಹಾಕಿ ಎಂದು ಕೇಳಿದ್ದೆನು ಎಂದರೆ ಸರಿ. ಆರೋಪಿಯ ಮತ್ತು ಅವರ ಮಗ ಮಹೇಂದ್ರ ಇಬ್ಬರೂ ಸೇರಿ ನನ್ನ ಬಳಿ ಚೀಟಿಯನ್ನು ಹಾಕಿದದರು ಎಂದರೆ ಸಾಕ್ಷಿಯು ಆರೋಪಿ ಮಾತ್ರ ಚೀಟಿಯನ್ನು ಹಾಕಿದ್ದರು ಎಂದು ನುಡಿದಿರುತ್ತಾರೆ. ಸದರಿ ಚೀಟಿಯ ಮೊತ್ತ 4 ಲಕ್ಷ ಎಂದರೆ ಸರಿ. ಪ್ರತಿ ತಿಂಗಳು ಹತ್ತು ಸಾವಿರವನ್ನು ಪಾವತಿ ಮಾಡುತ್ತಿದ್ದರು ಎಂದರೆ ಸರಿ. ಒಟ್ಟಾಗಿ 32 ಕಂತುಗಳನ್ನು ಪಾವತಿ ಮಾಡಬೇಕು ಎಂದರೆ ಸರಿ. ಆರೋಪಿ ಮತ್ತು ಅವರ ಮಗ ಒಟ್ಟಾಗಿ 16 ಕಂತುಗಳನ್ನು ಇಲ್ಲಿಯತನಕ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಬರಿ 5 ಕಂತುಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿಯು 16 ಕಂತಿನಂತೆ ಒಂದು ಲಕ್ಷದ ಅರುವತ್ತು ಸಾವಿರ ರೂ.ಗಳನ್ನು ನನಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ರೂ.2,20,000/- ರೂ.ಗಳನ್ನು ಚೀಟಿಯಂತೆ ನೀಡಬೇಕಾಗಿತ್ತು ಎಂದರೆ ಸರಿಯಲ್ಲ. ಸದರಿ ಹಣದಲ್ಲಿ ನಾನು ರೂ.1,00,000/- ಒಂದು ಬಾರಿ ಹಾಗೂ 60,000/- ರೂ.ಗಳನ್ನು ಮಾತ್ರ ಆರೋಪಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಉಳಿದ ಕಂತುಗಳನ್ನು ಪಾವತಿ ಮಾಡದ ಕಾರಣ ಬಾಯಿ ಮಾತಿನ ಮೂಲಕ ಕೇಳಿರುತ್ತೇನೆ. ಆರೋಪಿ ಮತ್ತು ಅವರ ಮಗ ಸದರಿ ಹಣದ ಭದ್ರತೆಗಾಗಿ ಸಹಿಯನ್ನು ಮಾಡಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಚೆಕ್ಕಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ನಾನು ನಮ್ಮ ಫೈನಾನ್ಸ್ ಕಛೇರಿಯಿಂದ ಆರೋಪಿಯ ಮಗನ ಹೆಸರಿನಲ್ಲಿ ಸಾಲದ ಪುಸ್ತಕವನ್ನು ನೀಡಿರುತ್ತೇನೆ ಎಂದರೆ ಸರಿ. ಅದರಲ್ಲಿ ರೂ.50,000/- ಎಂದು ಮತ್ತು ದಿ.10.09.2021 ಎಂದು ನಮೂದು ಇರುತ್ತದೆ ಎಂದರೆ ಸರಿ. ಆರೋಪಿ ಮತ್ತು ಅವರ ಮಗ ಉಳಿದ ಹಣವನ್ನು ನನಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚೀಟಿ ವ್ಯವಹಾರವನ್ನು ನಡೆಸುವಾಗ ಪರವಾನಗಿಯನ್ನು ಪಡೆದಿರಲಿಲ್ಲ. ನಾನು ಹಲವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿ ಹಣವನ್ನು ವಸೂಲು ಮಾಡಿರುತ್ತೇನೆ ಎಂದರೆ ಸರಿ. ಸಿ.ಸಿ.ಸಂ.121/2023 ರಲ್ಲಿ ನಟೇಶ್ ಎನ್ನುವವರು ವಿರುದ್ಧ ಪ್ರಕರಣವನ್ನು ದಾಖಲು ಮಾಡಿ ಹಣ ವಸೂಲಿ ಆಗಿರುತ್ತದೆ ಎಂದರೆ ಸರಿ. ಸಿ.ಸಿ.ಸಂ.60/2023 ರಲ್ಲಿ ವಿಶ್ವನಾಥ್ ಎನ್ನುವವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದು, ಸದರಿ ಪ್ರಕರಣವು ರಾಜಿ ಆಗಿರುತ್ತದೆ ಎಂದರೆ ಸರಿ. ಪಿ.,ಸಿ.ಆರ್.ಸಂ.1/2016 ನ್ನು ಮಹದೇವಮೂರ್ತಿ ಎನ್ನುವವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದು ಸದರಿ ಪ್ರಕರಣವು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಿ.ಸಿ.ನಂ.2211/2025 ನ್ನು ಎಂ.ಡಿ.ಮೂರ್ತಿ ಎನ್ನುವವರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿ. ಸಿ.ಸಿ.ಸಂ.1998/2025 ನ್ನು ಎಂ.ವಿನೋದ್ ಕುಮಾರ್ ಎನ್ನುವವರ ವಿರುದ್ಧ ಸಲ್ಲಿಸಿದ್ದು, ಸದರಿ ಪ್ರಕರಣವು ರಾಜಿ ಆಗಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**